ಓ.ಎಸ್. – 103/2020

ಡಿ. ಡಬ್ಲೂ – 1

ಸಾಕ್ಷಿಯನ್ನು ದಿಃ 27.06.2026 ರಂದು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲುಃ ವಾದಿ ಪರ ವಕೀಲರಾದ ಶ್ರೀ. ಕೆ.ಎನ್.ಎಸ್ ರವರಿಂದ**

**1.** ಬಿಳಿಸಿರಿ ಗ್ರಾಮದ ಸರ್ವೇ ನಂಬರ್ 137 ರಲ್ಲಿ ಒಟ್ಟು ಸುಮಾರು 400 ಎಕರೆಗೂ ಹೆಚ್ಚು ಜಮೀನು ಇದೆ. ಸದರಿ ಜಮೀನಿನಲ್ಲಿ ವಾದಿಗೆ 3 ಎಕರೆ 10 ಗುಂಟೆ ಜಮೀನು ಮಂಜೂರಾಗಿದೆ ಎಂದರೆ, ಸಾಕ್ಷಿಯು 2 ಕಡೆ ಒಟ್ಟು 3 ಎಕರೆ 10 ಗುಂಟೆ ಜಮೀನು ಮಂಜೂರಾಗಿದೆ ಎನ್ನುತ್ತಾರೆ. ಸದರಿ ಸ್ವತ್ತು ವಾದಿಯ ಸ್ವಾಧೀನದಲ್ಲಿ ಇದೆ ಎಂದರೆ ಸರಿ ಹಾಗೂ ಸದರಿ ಸ್ವಾಧೀನಕ್ಕೆ ನನ್ನ ಯಾವುದೇ ತಕರಾರು ಇಲ್ಲ ಎಂದರೆ ಸರಿ. ವಾದಿಯ ಜಮೀನಿನ ಉತ್ತರಕ್ಕೆ ಇದೇ ಸರ್ವೇ ನಂಬರ್ ನಲ್ಲಿನ ಕೊಲ್ಲುರಪ್ಪ ಗೌಡರವರ ಜಮೀನು, ಪಶ್ಚಿಮಕ್ಕೆ ಗ್ರಾಮ ಠಾಣಾ, ಪೂರ್ವ ಮತ್ತು ದಕ್ಷಿಣಕ್ಕೆ ಸರ್ವೇ ನಂಬರ್ 137 ರ ಉಳಿದ ಜಮೀನು ಇದೆ ಎಂದರೆ ಸರಿ. ಸದರಿ ಬಿಳಿಸಿರಿ ಗ್ರಾಮದ ಸರ್ವೇ ನಂಬರ್ 137 ರಲ್ಲಿ ನನ್ನ ತಾಯಿ ಮಂಜಮ್ಮ ರವರಿಗೆ 2 ಎಕರೆ ಸ್ವತ್ತು ಮಂಜೂರಾಗಿದೆ. ಸರ್ವೇ ನಂಬರ್ 137 ರಲ್ಲಿ ನನ್ನ ಹೆಸರಿಗೆ ಯಾವುದೇ ಕ್ಷೇತ್ರ ಮಂಜೂರಾಗಿಲ್ಲ. ನನ್ನ ಅನುಭವದಲ್ಲಿ ಸರ್ವೇ ನಂಬರ್ 137 ರ ಯಾವುದೇ ಕ್ಷೇತ್ರ ಇಲ್ಲ ಎಂದರೆ ಸರಿಯಲ್ಲ. ಮುಂದುವರೆದು 2 ಎಕರೆ ಕ್ಷೇತ್ರದಲ್ಲಿ ನಾನು ಸಾಗುವಳಿ ಮಾಡುತ್ತಿದ್ದು, ಅದು ಇನ್ನೂ ನನಗೆ ಮಂಜೂರಾಗಿಲ್ಲ. ಮಂಜೂರಾತಿಗಾಗಿ ನಾನು ಅರ್ಜಿಯನ್ನು ಕೊಟ್ಟಿದ್ದೇನೆ. ಅರ್ಜಿಯ ಸ್ವೀಕೃತಿಯನ್ನು ಬಿಟ್ಟು ಬೇರೆ ಯಾವುದೇ ದಾಖಲೆಗಳು ನನ್ನ ಹೆಸರಿಗೆ ಇಲ್ಲ. ನಾನು ಕೊಟ್ಟಿರುವ ಅರ್ಜಿಯಲ್ಲಿ ಮಂಜೂರು ಕೋರಿರುವ 2 ಎಕರೆಗೆ ಯಾವುದೇ ಚಕ್ಕು ಬಂದಿಯನ್ನು ಬರೆದಿಲ್ಲ ಎಂದರೆ ಸರಿ.

**2.** ನನ್ನ ತಾಯಿ ಮಂಜಮ್ಮನ ಹೆಸರಿಗೆ ಮಂಜೂರಾಗಿರುವ 2 ಎಕರೆಗೆ ಹೊಸ ನಂಬರನ್ನು ಕೊಟ್ಟಿಲ್ಲ. ಮಂಜೂರಾದ ನಂತರ ಅದು ಪೋಡಿಯಾಗಿಲ್ಲ. ದಾವಾ ಸ್ವತ್ತಿನಿಂದ ನನ್ನ ತಾಯಿಗೆ ಮಂಜೂರಾಗಿರುವ ಜಮೀನು ಸುಮಾರು 15 ಅಡಿ ದೂರದಲ್ಲಿ ಇದೆ. ದಾವಾ ಸ್ವತ್ತು ಮತ್ತು ನನ್ನ ತಾಯಿಗೆ ಮಂಜೂರಾಗಿರುವ ಸ್ವತ್ತುಗಳು ಬೇರೆ ಬೇರೆ ಎಂದರೆ ಸರಿ. ದಾವಾ ಸ್ವತ್ತು, ನನ್ನ ತಾಯಿಗೆ ಮಂಜೂರಾಗಿರುವ ಸ್ವತ್ತು ಹಾಗೂ ನಾನು ಅನಧಿಕೃತ ಸ್ವಾಧೀನದಲ್ಲಿರುವ ಸ್ವತ್ತುಗಳು ಬೇರೆ ಬೇರೆ ಎನ್ನುವುದು ಸರಿಯಲ್ಲ. ನಾನು ಅನಧಿಕೃತ ಸ್ವಾಧೀನದಲ್ಲಿರುವ 2 ಎಕರೆ ಸ್ವತ್ತು ದಾವಾ ಸ್ವತ್ತಿನಲ್ಲಿ ಸೇರಿಕೊಂಡಿದ್ದು, ಅದನ್ನು ಕಬಳಿಸಲು ವಾದಿಯು ಈ ದಾವೆಯನ್ನು ಸಲ್ಲಿಸಿದ್ದಾರೆ.

**3.** ದಾವಾ ಸ್ವತ್ತು ಪೋಡಿಯಾಗಿದ್ದು, ಅದನ್ನು ವಜಾ ಮಾಡಿಸಲು ಮತ್ತು ದಾವಾ ಸ್ವತ್ತು ವಾದಿಗೆ ಮಂಜೂರು ಆಗಿರುವುದು ಸರಿಯಾಗಿಲ್ಲ ಎಂದು ನಾನು ಸೂಕ್ತ ಪ್ರಾಧಿಕಾರದ ಮುಂದೆ ಮೇಲ್ಮನವಿ ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ದಾವಾ ಶೆಡ್ಯೂಲ್ ನಲ್ಲಿ ಹೇಳಿದ 3 ಎಕರೆ 10 ಗುಂಟೆ ಕ್ಷೇತ್ರವು 2 ಬ್ಲಾಕ್ ಗಳಲ್ಲಿ ಇದೆ. ಬ್ಲಾಕ್ ನಂಬರ್ 1 ರಲ್ಲಿ 2 ಎಕರೆ 25 ಗುಂಟೆ ಇದ್ದು, ಸದರಿ ಕ್ಷೇತ್ರಕ್ಕೆ ನನ್ನ ಯಾವುದೇ ತಕರಾರು ಇರುವುದಿಲ್ಲ. ಆದರೆ ಬ್ಲಾಕ್ ನಂಬರ್ 8 ಬ್ಲಾಕ್ ನಂಬರ್ 1 ರಿಂದ ಸುಮಾರು ಅರ್ಧ ಕಿ.ಮೀ ದೂರದಲ್ಲಿ ಇದ್ದು, ಅದರ ಕ್ಷೇತ್ರ 25 ಗುಂಟೆ. ದಾವಾ ಶೆಡ್ಯೂಲ್ ನಲ್ಲಿ ಹೇಳಿದ ಕ್ಷೇತ್ರದಲ್ಲಿ ವಾದಿಯು ಸ್ವಾಧೀನಾನುಭವದಲ್ಲಿ ಅದರ ಯಾವುದೇ ಭಾಗದಲ್ಲಿ ನಾನು ಸ್ವಾಧೀನಾನುಭವದಲ್ಲಿ ಇಲ್ಲ ಎಂದರೆ ಸರಿಯಲ್ಲ.

**4.** ದಾವಾ ಸ್ವತ್ತಿನಲ್ಲಿ ವಾದಿಯು ಅಡಿಕೆ ಗಿಡಗಳನ್ನು ಹಾಕಿ ಅದರ ಸುತ್ತಲೂ ಕಲ್ಲು ಕಂಬದ ಬೇಲಿ ಹಾಕಿದ್ದಾರೆ ಎನ್ನುವುದು ಸರಿಯಲ್ಲ. ದಾವಾ ಸ್ವತ್ತಿನಲ್ಲಿನ ವಾದಿಯ ಅಡಿಕೆ ಗಿಡಗಳನ್ನು ನಾನು ಕಿತ್ತು ಹಾಕಿದ್ದೇನೆ ಎಂದು ಆಪಾಧಿಸಿ ವಾದಿಯು ನನ್ನ ವಿರುದ್ಧ ಕ್ರಿಮಿನಲ್ ಕೇಸನ್ನು ಹಾಕಿದ್ದಾರೆ ಎಂದರೆ, ಅದು ಸುಳ್ಳು ಕೇಸು ಎನ್ನುತ್ತಾರೆ. ದಾವಾ ಸ್ವತ್ತಿನಲ್ಲಿನ ವಾದಿಯ ಸ್ವಾಧೀನಕ್ಕೆ ನಾನು ವಿನಃ ಕಾರಣ ಕಿರುಕುಳ ನೀಡಿದ್ದರಿಂದ ವಾದಿಯು ಈ ದಾವೆ ಸಲ್ಲಿಸಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೋಡಿಗೆ ಅಧಿಕಾರಿಗಳು ಬಂದಿದ್ದಾಗ ವಾದಿಯ ಸ್ವಾಧೀನಾನುಭವದಲ್ಲಿರು ಕ್ಷೇತ್ರವನ್ನು ಅಳತೆ ಮಾಡಿದ್ದಾರೆ ಎನ್ನುವುದು ಸರಿಯಲ್ಲ. ಮುಂದುವರೆದು ದೂರದಲ್ಲಿರುವ ಬ್ಲಾಕ್ ನಂಬರ್ 8 ರ ಜಮೀನನ್ನು ಬ್ಲಾಕ್ ನಂಬರ್ 1 ರಲ್ಲಿ ಸೇರ್ಪಡೆ ಮಾಡಿದ್ದರಿಂದ ನನ್ನ ಸ್ವಾಧೀನದ ಸ್ವತ್ತು ದಾವಾ ಸ್ವತ್ತಿನಲ್ಲಿ ಸೇರ್ಪಡೆಗೊಂಡ ಕಾರಣ ನಾನು ತಕರಾರನ್ನು ಮಾಡಿದ್ದೇನೆ. ನಿಡಿ–4 ರಂತೆ ನಾನು ಸಾಗರದ ತಹಶೀಲ್ದಾರ್ ರವರಿಗೆ ವಾದಿಯ ವಿರುದ್ಧ ಅರ್ಜಿ ನೀಡಿದ್ದೇನೆ ಎಂದರೆ ಸರಿ . ದಾವಾ ಶೆಡ್ಯೂಲ್ ನಲ್ಲಿ ಕಾಣಿಸಿದ ಸ್ವತ್ತು ವಾದಿಯ ಸ್ವಾಧೀನಾನುಭವದಲ್ಲಿ ಇದೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ರೀತ್ಯಾ ಗಣಕೀಕರಿಸಲಾಯ್ತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ವ್ಯವಹಾರ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ, ಸಾಗರ.